ಭಾನುವಾರ 29.4.2018 ಸಂಪುಟ 52 • ಸಂಚಿಕೆ 118 • ಪುಟ 12+6 • ಬೆಲೆ ₹5 epaper.kannadaprabha.in • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



# ಭಾರತಿಗೆ ಡಾಕ್ಟರೇಟ್



**ಮಂಗಳೂರು:** ಸಹ್ಯಾದ್ರಿ ತಾಂತ್ರಿಕ ಕಾಲೇಜಿನ ಗ್ರಂಥಪಾಲಕಿ ಭಾರತಿ ಕೆ. ಇವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇವರು ಬಂಟ್ವಾಳ ಶ್ರೀವೆಂಕಟರಮಣ ಸ್ವಾಮಿ ಕಾಲೇಜಿನ ಗ್ರಂಥಪಾಲಕಿ ಡಾ. ಸುಜಾತ ಎಚ್. ಆರ್. ಇವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧ 'ಡಿಜಿಟಲ್ ಲೈಬ್ರೆರೀಸ್ ಇನ್ ಎಂಜಿನಿಯರಿಂಗ್ ಎಜುಕೇಷನಲ್ ಇನ್ಸ್ಟಿಟ್ಯೂಷನ್ಸ್ ಇನ್ ಕರ್ನಾಟಕ ಸ್ಟೇಟ್: ಆನ್ ಎನಲಿಟಿಕಲ್ ಸ್ಟಡಿ'ಗೆ ತಮಿಳ್ನಾಡಿನ ತಾಂಜಾವೂರು ಪ್ರಿಸ್ಟ್ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿಯನ್ನು ನೀಡಿದೆ. ಇವರು ಸುಮಾರು 15 ವರ್ಷಗಳಿಂದ ಸಹ್ಯಾದ್ರಿ ಕಾಲೇಜಿನಲ್ಲಿ ಗ್ರಂಥಪಾಲಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಾಮಂಜೂರಿನ ಮೆಸ್ಕಾಂ ಉದ್ಯೋಗಿ ಜಯಪ್ರಕಾಶ್ ಅವರ ಧರ್ಮಪತ್ನಿ ಹಾಗೂ ಪುತ್ತೂರು ತಾಲೂಕು ಈಶ್ವರಮಂಗಲ ಕುದ್ರೋಳಿ ಮುತ್ತಪ್ಪ ಪೂಜಾರಿ ಮತ್ತು ಸುಗುಣಾವತಿ ದಂಪತಿ ಪುತ್ರಿ. ಈ ಸಂದರ್ಭದಲ್ಲಿ ಭಂಡಾರಿ ಫೌಂಡೇಶನ್ ಅಧ್ಯಕ್ಷ ಡಾ. ಮಂಜುನಾಥ್ ಭಂಡಾರಿ, ನಿರ್ದೇಶಕ ಡಾ. ಡಿ ಎಲ್ ಪ್ರಭಾಕರ ಮತ್ತು ಪ್ರಾಂಶುಪಾಲ ಡಾ. ಉಮೇಶ್ ಎಮ್ ಭೂಶಿ ಅಭಿನಂದಿಸಿದ್ದಾರೆ.